ಶ್ರೀ ಹೆಚ್.ಡಿ. ರೇವಣ್ಣ (ಇಂಧನ ಸಚಿವರು): ಈಗಾಗಲೇ ಎಂ.ಡಿ. ಯವರನ್ನು ಅಲ್ಲಿಗೆ ಕಳುಹಿಸಿದ್ದೇವೆ. ಕಂಬ, ವೈರ್‌ಗಳಿಗೆ ಯಾವುದೇ ತೊಂದರೆ ಇಲ್ಲ. ಕೆಲಸವನ್ನು ಮಾಡಿಸುತ್ತೇವೆ.

(ಅಡಚಣೆ)

ಅಧ್ಯಕ್ಷರು: ಈಗ ಇದನ್ನು ಮುಕ್ತಾಯ ಮಾಡಲಾಗಿದೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಬಸವರಾಜುರವರೇ, ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬೇಕು ಎಂದಿದ್ದಿರಿ. ಪ್ರಸ್ತಾಪ ಮಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ಮತ್ತು ಮಾಧುಸ್ವಾಮಿಯವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ತಮಗೆ ಮನವಿ ಕೊಟ್ಟಿದ್ದೇವೆ.

ಅಧ್ಯಕ್ಷರು: ಆಯಿತು. ಈಗ ಬಸವರಾಜುರವರನ್ನು ಕರೆದಿದ್ದೇನೆ ತಾವು ಕುಳಿತುಕೊಳ್ಳಿ.

(ಇ) **ವಿಷಯ:– ಅರಸೀಕೆರೆ ನಗರದಲ್ಲಿ ಉಂಟಾದ ದೊಡ್ಡ ಸ್ಫೋಟದ ಬಗ್ಗೆ**

ಶ್ರೀ ಎ.ಎಸ್. ಬಸವರಾಜು (ಅರಸೀಕೆರೆ): ಮಾನ್ಯ ಅಧ್ಯಕ್ಷರೆ, ಅರಸೀಕೆರೆ ನಗರದಲ್ಲಿ ದೊಡ್ಡ ಸ್ಫೋಟವಾಯಿತು. ಆ ಸ್ಫೋಟದಿಂದ ಇಡೀ ಅರಸೀಕೆರೆ ನಗರವೇ ಧಿಗ್ಭ್ರಮೆಯಾಯಿತು. ಆದರೆ ಆ ಶಬ್ಧ ಸಿಲಿಂಡರ್‌ದ್ದೋ ಅಥವಾ ಪಟಾಕಿಯದ್ದೋ ಏನೋ ಗೊತ್ತಾಗಿಲ್ಲ. ಆಗ ಒಂದು ಮನೆಯಲ್ಲಿರತಕ್ಕಂಥ ಸೋಮ, ರವಿ, ಮಂಜುನಾಥ್‌ರವರುಗಳ ದೇಹ ಈ ಸ್ಫೋಟದಿಂದ ಛಿದ್ರವಾಯಿತು. ಇದಲ್ಲದೇ ಈ ಸ್ಫೋಟದಿಂದ ಪಕ್ಕದ ಮನೆಯ ಗೋಡೆ ಬಿದ್ದು ಆರ್. ರುಕ್ಮಿಣಿ ಮತ್ತು ಕೀರ್ತಿ ಎನ್ನುವ ಎರಡು ವರ್ಷದ ಮಗು ಕೂಡ ಈ ದುರ್ಘಟನೆಯಲ್ಲಿ ಬಲಿಯಾದರು. ಅದೇ ಸಂದರ್ಭದಲ್ಲಿ ಹಾಸನದಲ್ಲಿ ಮುಖ್ಯ ಮಂತ್ರಿಗಳಾದ ಕುಮಾರಸ್ವಾಮಿಯವರು, ರೇವಣ್ಣನವರು, ಜಗದೀಶ್ ಶೆಟ್ಟರ್, ಆಹಾರ ಸಚಿವರುಗಳು ಹಾಗೂ ಉದಾಸಿಯವರೂ ಕೂಡ ಕಾರ್ಯಕ್ರಮಕ್ಕೆ ಬಂದಾಗ ನಾನೂ ಕೂಡ ಅಲ್ಲಿಗೆ ಹೋಗಿ ನನ್ನ ಒಂದು ಗೋಳನ್ನು ಅವರ ಹತ್ತಿರ ತೋಡಿಕೊಂಡೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಹೊಳೆನರಸೀಪುರದ ಕಾರ್ಯಕ್ರಮಕ್ಕೋಸ್ಕರ ಹೋಗಬೇಕಾದ್ದರಿಂದ ನೋಡಲು ಜಗದೀಶ್ ಶೆಟ್ಟರ್‌ರವರಿಗೆ ಹೇಳಿದರು. ಆಗ ಕಂದಾಯ ಸಚಿವರಾದ ಜಗದೀಶ್ ಶೆಟ್ಟರ್ ರವರನ್ನು ನಾನು ಅಲ್ಲಿಗೆ ಕರೆದುಕೊಂಡು ಹೋಗಿ ಅವರಿಗೆ ತೋರಿಸಿದೆ. ಅಲ್ಲಿ ಸ್ಫೋಟವಾಗಿ ಎರಡು ಮನೆ ಧ್ವಂಸವಾಗಿದೆ, ಅದನ್ನು ತೋರಿಸಿ ಅವರುಗಳಿಗೆ ಸರ್ಕಾರದ ವತಿಯಿಂದ ಪರಿಹಾರ ಕೊಡಬೇಕೆಂದು ಕೇಳಿಕೊಂಡೆ. ಮಾನ್ಯ

ಮುಖ್ಯಮಂತ್ರಿಗಳಿಗೂ ಪರಿಹಾರ ಕೊಡಿ ಎಂದು ಕೇಳಿಕೊಂಡಿದ್ದೇನೆ. ಆದರೆ ಇವೊತ್ತಿನವರೆಗೂ ಕೊಟ್ಟಿಲ್ಲ. ಸುಮಾರು ಎರಡು ತಿಂಗಳಾಗಿದೆ. ನಿರಪರಾಧಿಯಾಗಿರತಕ್ಕಂಥವರ ಮನೆಯ ಗೋಡೆಯೂ ಬಿದ್ದು ಎರಡು ವರ್ಷದ ಮಗು ಅಸು ನೀಗಿರತಕ್ಕಂಥದ್ದು ಅಲ್ಲಿ ನಡೆದಿದೆ. ಹಾಗೆಯೇ ವೆಂಕಟೇಶ್ ಎನ್ನುವ 56 ವರ್ಷ ಮತ್ತು ಅವರ ಧರ್ಮಪತ್ನಿ ರುಕ್ಮಿಣಿ ಎನ್ನುವವರು ಪಕ್ಕದ ಮನೆಯಲ್ಲಿ ಏನು ಇದ್ದರೋ ಅವರ ಮನೆ ಗೋಡೆ ಕೂಡ ಕುಸಿದುಕೊಂಡು ಹೋಗಿದೆ. ಇಷ್ಟು ಸಾವೂ ಕೂಡ ಆಗಿದೆ. ನಿಜವಾಗಿಯೂ ಕೂಡ ಅವರಿಗೆ ಸರ್ಕಾರ 10 ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 15.5.2006ರಂದು ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಸುಭಾಷ್ ನಗರದ ಮನೆಯೊಂದರಲ್ಲಿ ಸ್ಫೋಟ ಸಂಭವಿಸಿದ್ದರಿಂದ ಒಟ್ಟು 6 ಜನರು ಮೃತರಾಗಿರುತ್ತಾರೆ. ಈ ಬಗ್ಗೆ ಶ್ರೀ ಎ.ವಿ. ಚಂದ್ರಶೇಖರ್ ಬಿನ್ ವೆಂಕಟೇಶಪ್ಪ ನವರು ಅರಸೀಕೆರೆ ನಗರ ಠಾಣೆಗೆ ದೂರು ನೀಡಿದ ಪ್ರಯುಕ್ತ ಅರಸೀಕೆರೆ ನಗರ ಠಾಣೆ ಮೊಕದ್ದಮೆ ಸಂಖ್ಯೆ 57:2006, ಕಲಂ 3,5 ಮತ್ತು 6, ಸ್ಫೋಟಕ ವಸ್ತುಗಳ ಅಧಿನಿಯಮ 1908 : 304 ಐ.ಪಿ.ಸಿ. ರೀತಿ ಪ್ರಕರಣ ದಾಖಲಾಗಿರುತ್ತದೆ. ಈ ಘಟನೆಯಲ್ಲಿ ಕೆಳಕಾಣಿಸಿರುವ ವ್ಯಕ್ತಿಗಳು ಮೃತರಾಗಿದ್ದಾರೆ. ವೆಂಕಟೇಶಪ್ಪ 56 ವರ್ಷ, ಶ್ರೀಮತಿ ರುಕ್ಮಿಣಿ 51 ವರ್ಷ, ಕುಮಾರ ಕೀರ್ತನ 2 ವರ್ಷ, ಶ್ರೀ ಯೋಗೀಶ್ 22 ವರ್ಷ, ಶ್ರೀ ಪ್ರವೀಣ್ 21 ವರ್ಷ, ಶ್ರೀ ಕೆ.ಎಸ್. ಮಂಜುನಾಥ್ 27 ವರ್ಷ, ಮೃತಪಟ್ಟ ಯೋಗೀಶ್ ಬಿನ್ ಕೃಷ್ಣಾಚಾರಿ ಅರಸೀಕೆರೆ ತಾಲ್ಲೂಕಿನ ಆಗುಂಧ ಗ್ರಾಮದ ನಿವಾಸಿ. ಈತನ ಚಿಕ್ಕಪ್ಪ ಶ್ರೀ ಶಂಕರಾಚಾರಿಯವರು ರಾಜ್‌ಕಮಲ್ ಫೈರ್ ವರ್ಕ್ಸ್‌ನ ಮಾಲೀಕರು. ಇದರಿಂದಾಗಿ ಈತನಿಗೂ ಸಹ ಪಟಾಕಿ ತಯಾರಿಸುವ ಬಗ್ಗೆ ಮಾಹಿತಿ ಇತ್ತು. ಈತನು ತನ್ನ ಕುಟುಂಬದಲ್ಲಿ ಒಬ್ಬನೇ ಮಗನಾಗಿದ್ದು, ಈತನು ಅರಸೀಕೆರೆಗೆ ಚಿನ್ನ ಬೆಳ್ಳಿ ಕೆಲಸ ಮಾಡಿಕೊಂಡಿರುವ ಆತನ ಮಾವನಾದ ಶ್ರೀ ಲೋಕೇಶನ ಮನೆಯಲ್ಲಿ ಎರಡು ವರ್ಷದಿಂದ ಚಿನ್ನಬೆಳ್ಳಿ ಕೆಲಸ ಮಾಡಿಕೊಂಡಿದ್ದ. ಸದರಿಯವರು ಮನೆಯಲ್ಲಿ ಇಲ್ಲದ ಸಮಯವನ್ನು ನೋಡಿ ಮೃತ ಯೋಗಿಶನು ಪಟಾಕಿ ತಯಾರಿಸುವ ರಾಸಾಯನಿಕಗಳನ್ನು ಮನೆಯಲ್ಲಿ ಇಟ್ಟುಕೊಂಡಿದ್ದರಿಂದ ಈ ಸ್ಫೋಟ ಸಂಭವಿಸಿದೆ. ಘಟನೆ ನಡೆದ ಮನೆಯಲ್ಲಿ ಮನೆಯ ಹಾಲಿನಲ್ಲಿ ದೊರೆತಿರುವ ರಾಸಾಯನಿಕ ವಸ್ತುಗಳನ್ನು ಪಟಾಕಿ ತಯಾರಿಸುವ ರಾಸಾಯನಿಕ

ವಸ್ತುಗಳೆಂದು ಹಾಗೂ ಇದರಿಂದಾಗಿ ಸ್ಫೋಟ ಉಂಟಾಗಿದೆಯೆಂದು ತಜ್ಞರು ಅಭಿಪ್ರಾಯ ಪಟ್ಟಿರುತ್ತಾರೆ. ಹಾಗೂ ಈ ವಸ್ತುಗಳ ಸ್ಯಾಂಪಲ್‌ಗಳನ್ನು ನ್ಯಾಯ ವಿಜ್ಞಾನ ಪ್ರಯೋಗಶಾಲೆ, ಬೆಂಗಳೂರು ಇಲ್ಲಿಗೆ ತಜ್ಞರ ಅಭಿಪ್ರಾಯಕ್ಕೆ ಕಳುಹಿಸಿ ಕೊಡಲಾಗಿದೆ. ಪ್ರಕರಣದ ತನಿಖೆ ಮುಂದುವರೆದಿದೆ. ಈ ಕೃತ್ಯದ ಇಬ್ಬರು ಆರೋಪಿಗಳಾದ ಯೋಗೀಶ್ ಮತ್ತು ಪ್ರವೀಣ ಮೃತ ಹೊಂದಿರುತ್ತಾರೆ. ನ್ಯಾಯ ವಿಜ್ಞಾನದ ಪ್ರಯೋಗಶಾಲೆಯ ವರದಿ ನಿರೀಕ್ಷಿಸಲಾಗಿದೆ. ಮೃತರಿಗೆ ಪರಿಹಾರ ನೀಡುವ ಬಗ್ಗೆ ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳಬೇಕಾಗಿದೆ.

ಇದರಲ್ಲಿ ಸನ್ಮಾನ್ಯ ಅಧ್ಯಕ್ಷರೆ, ಉತ್ತರ ತಯಾರಾಗಿದೆ. ಇದರ ಜೊತೆಗೆ ಇವರು ಕಾನೂನು ರೀತಿಯಾಗಿ ಪಟಾಕಿ ತಯಾರಿಸಬೇಕಾದರೆ ಕಾನೂನಿನ ಪರವಾನಗಿಯನ್ನು ತೆಗೆದುಕೊಳ್ಳಬೇಕು. ಈತನಿಗೆ ಇದರ ಬಗ್ಗೆ ಪ್ರಾಥಮಿಕ ಜ್ಞಾನ ಇದೆ ಎನ್ನುವ ಒಂದೇ ಕಾರಣಕ್ಕಾಗಿ ತಾನು ಉಳಿದುಕೊಂಡಿದ್ದ ಮಾವನ ಮನೆಯಲ್ಲಿ ಅನಧಿಕೃತವಾಗಿ ಲೈಸೆನ್ಸ್ ಇಲ್ಲದೆ ಈ ಸ್ಫೋಟಕ ವಸ್ತುಗಳನ್ನು ಸಂಗ್ರಹ ಮಾಡಿ, ಈ ಒಂದು ಕೃತ್ಯಕ್ಕೆ ಕಾರಣರಾಗಿದ್ದಾರೆ. ಅವರ ಮೇಲೆ ಸೆಕ್ಷನ್ 301 (ಎ) ಕೆಳಗೆ ಏನಾದರೂ ನಾವು ಕ್ರಮ ಕೈಗೊಳ್ಳಬೇಕೆಂದಿದ್ದರೆ ಅವರು ಮೃತ ಪಟ್ಟಿದ್ದಾರೆ. ಈ ಕಾರಣಕ್ಕಾಗಿ ಪರೀಕ್ಷೆ ಮಾಡುತ್ತಿದ್ದೇವೆ. ಅನಧಿಕೃತವಾಗಿ ಲೈಸೆನ್ಸ್ ಇಲ್ಲದೆ, ಸ್ಫೋಟಕಕ್ಕೆ ಕಾರಣರಾಗಿರುವಂತಹ ಇವರುಗಳಿಗೆ ಪರಿಹಾರ ಕೊಡುವುದು ಸಾಧುವೆ ಅಲ್ಲವೆ ಎನ್ನುವುದನ್ನು ನೋಡಬೇಕಾಗಿದೆ. ಆದರೆ ನಾನು ಮಾನವೀಯ ದೃಷ್ಟಿಯಿಂದ ಕನಿಷ್ಟ ಅವರಿಗೆ ಯಾರಾದರೂ ವಾರಸುದಾರರು ಇದ್ದಾರೆಯೇ ಎಂದು ಕೇಳಿದರೆ ಇಲ್ಲ ಎನ್ನುವ ಮಾಹಿತಿ ಬಂದಿದೆ. ಪಕ್ಕದ ಮನೆಯವರಿಗೆ ಏನಾದರೂ ಹಾನಿಯಾಗಿರುವಂತಹ ಸಂಭವವಿದ್ದರೆ, ಅದರ ವರದಿಯನ್ನು ತರಿಸಿಕೊಂಡು ಕಾನೂನು ಚೌಕಟ್ಟಿನಲ್ಲಿ ಮಾನವೀಯ ದೃಷ್ಟಿಕೋನದಿಂದ ಹಣ ಕೊಡಿಸುವಂತಹ ಪ್ರಯತ್ನವನ್ನು ಮಾಡುತ್ತೇನೆ. ಒಂದು ವೇಳೆ ಸಾಧ್ಯವಾಗದೆ ಇದ್ದರೆ, ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಆದರೂ ಕೂಡ ಕೊಡಿಸುವ ಪ್ರಯತ್ನ ಮಾಡುತ್ತೇನೆ.

ಶ್ರೀ ಎ.ಎಸ್. ಬಸವರಾಜ್: ಪಕ್ಕದ ಮನೆಯ ಗೋಡೆ ಬಿದ್ದುಬಿಟ್ಟು ನಿರಪರಾಧಿಗಳು ವೆಂಕಟೇಶ, ರುಕ್ಮಿಣಿ ಮತ್ತು ಎರಡು ವರ್ಷದ ಮಗು ಅವರಿಗಾದರೂ ಪರಿಹಾರ ಸಿಗಬೇಕಲ್ಲಾ. ಅವರಿಗೆ ಅಂತಹ ದುರಂತವಾಗಿಲ್ಲ. ಗೋಡೆ ಕುಸಿದು ಹೋಗಿದೆ. ನಿರಪರಾಧಿಗಳು, ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ ಮುಖ್ಯಮಂತ್ರಿಗಳ ನಿಧಿಯಿಂದ ಎರಡೆರಡು ಲಕ್ಷ ಕೊಡಿಸಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಎರಡೆರಡು ಲಕ್ಷ ರೂ. ಬರತಕ್ಕಂಥ ಪ್ರಶ್ನೆ ಇಲ್ಲವೇ ಇಲ್ಲ. ಮತ್ತು ಇದನ್ನು ನಾವು ಕಾನೂನಿನ ಚೌಕಟ್ಟಿನಲ್ಲಿ ಆದರೆ ಬೇರೆ ಕಡೆ ಕೊಟ್ಟಂತೆ 50 ಸಾವಿರ ರೂಪಾಯಿ ಕೊಡಬಹುದು. ಪಕ್ಕದ ಮನೆಯವರು ನಿರಪರಾಧಿಗಳು, ಯಾರೋ ಮಾಡಿದ್ದರಿಂದ ತೊಂದರೆಯಾಗಿದೆ. ಇದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

(ಈ) ವಿಷಯ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಉಪಕುಲಪತಿಗಳ ಅವಧಿ ಮೀರಿ ಮುಂದುವರಿಸುತ್ತಿರುವುದರ ಬಗ್ಗೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಅಧ್ಯಕ್ಷರೆ, ಮುಖ್ಯವಾಗಿ ಈ ವಿಷಯ ಕಾನೂನಿಗೆ ಮತ್ತು ಸರ್ಕಾರದ ವ್ಯವಸ್ಥೆಗೆ ಸಂಬಂಧ ಪಟ್ಟಂತಹ ವಿಷಯವಾಗಿದ್ದು, ಇದರ ಬಗ್ಗೆ ಎಲ್ಲರೂ ಗಂಭೀರವಾಗಿ ಯೋಚಿಸಬೇಕು. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಇದೆ, ಅದು ನಮಗೆಲ್ಲಾ ಗೊತ್ತಿದೆ. ಅದರ ಕುಲಪತಿಗಳಾಗಿ ಡಾ॥ ಕೆ. ಬಲವೀರ ರೆಡ್ಡಿಯವರು 2001 ರಿಂದ ಅಲ್ಲಿ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಆದರೆ ನಮ್ಮ ವ್ಯವಸ್ಥೆ ಹೇಗಿದೆ ಎನ್ನುವುದನ್ನು ಸ್ವಲ್ಪ ಯೋಚನೆ ಮಾಡಿದರೆ ಈ ವ್ಯವಸ್ಥೆಯನ್ನು ಹೇಗೆ ಬೇಕಾದರೂ ಯಾರು ಬೇಕಾದರೂ ನಡೆಸಿಕೊಂಡು ಹೋಗುತ್ತಾರೆನ್ನುವಂತಹ ಅನುಮಾನ ರಾಜ್ಯದ ಜನತೆಗೆ ಆಗಿದೆ. ಸರ್ಕಾರದ ಯಾವುದೇ ನಿಯಮಾವಳಿಗಳ ಪ್ರಕಾರ, ಸರ್ಕಾರದ ಯಾವುದೆ ಕಾಯಿದೆಗಳ ಪ್ರಕಾರ 65 ವರ್ಷ ಆದನಂತರದಲ್ಲಿ ಸರ್ಕಾರದ ಯಾವುದೇ ಕೆಲಸದಲ್ಲಿ ಇರುವ ಹಾಗೆ ಇಲ್ಲ. ಅದಕ್ಕೆ ಯಾವ ಕಾಯಿದೆಗಳು ಅವಕಾಶ ಮಾಡಿಕೊಡುವುದಿಲ್ಲ. ಆದರೆ ಈ ಒಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಕಾಯಿದೆಯಲ್ಲಿ ಈ ವಿಷಯದ ಬಗ್ಗೆ ಸ್ಪಷ್ಟತೆ ಇಲ್ಲವೆನ್ನುವಂತಹ ಒಂದೇ ಒಂದು ವಿಷಯವನ್ನು ಆಧಾರವಾಗಿಟ್ಟುಕೊಂಡು ಅಲ್ಲಿ ಅವರು ಮುಂದುವರೆಯುತ್ತಿದ್ದಾರೆ. ವಿಶ್ವವಿದ್ಯಾಲಯ, ಅದು ಯಾವುದೇ ರಾಜ್ಯದ ದೇಶದ ಕಾಯಿದೆಗಿಂತ ಮೇಲಿರುವಂತಹ ಸಂಸ್ಥೆಯಲ್ಲ ಅದು. ಅದೂ ಕೂಡ ಎಲ್ಲಾ ಕಾಯಿದೆಗಳಿಗೆ ಒಳ ಪಡಬೇಕಾದಂತಹ ಒಂದು ಅಂಗ ಸಂಸ್ಥೆ ಇದೆ; ಬೇರೆ ಬೇರೆ ವಿಶ್ವವಿದ್ಯಾಲಯ ಗಳಲ್ಲಿ ಈ ನಿಯಮ ಪಾಲನೆಯಾಗುತ್ತಿದೆ. ಆದರೆ ಈ ತಾಂತ್ರಿಕ ವಿಶ್ವವಿದ್ಯಾನಿಲಯದಲ್ಲಿ ಶ್ರೀ ಬಲವೀರ ರೆಡ್ಡಿಯವರು ಯಾವ ಕಾರಣವನ್ನು ಮುಂದಿಟ್ಟು ಅಲ್ಲಿ ಮುಂದುವರೆಯುತ್ತಿದ್ದಾರೆ ಎಂಬುದು ಗೊತ್ತಿಲ್ಲ. ಅವರು ಜೂನ್ 13ಕ್ಕೆ ನಿವೃತ್ತರಾಗಬೇಕಿತ್ತು. ಅವರಿಗೆ ಜೂನ್ 13ಕ್ಕೆ 65 ವರ್ಷವಾಗಿದೆ.